ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ ೨೪ನೇ ಮಾರ್ಚ್ ೧೯೮೭ ಚೈತ್ರ ೩, ೧೯೦೯ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಮಧ್ಯಾಹ್ನ ೩-೪೫ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ.ಜಿ. ಬಣಕಾರ್)ಅವರು ಪೀಠವನ್ನು ಅಲಂಕರಿಸಿದರು.]

ಧರಣಿ ಸತ್ಯಾಗ್ರಹದ ಅಂತ್ಯ ಮತ್ತು ಸದಸ್ಯರಾದ ಶ್ರೀ ಅಡ್ಯಂತಾಯರವರನ್ನು ಅಮಾನತುಗೊಳಿಸಲ್ಪಟ್ಟ ಆಜ್ಞೆಯ ರದ್ದತಿ.

ಶ್ರೀ ಎಂ. ಎಸ್. ಕೃಷ್ಣನ್.—ಸನ್ಮಾನ್ಯ ಅಧ್ಯಕ್ಷರೇ, ಆರು ದಿವಸಗಳಿಂದ ನಡೆದಿದ್ದ ಘಟನೆಗಳ ಬಗ್ಗೆ ಈಗ ಪರಿಹಾರವಾಗುವ ಸೂಚನೆಗಳು ಕಂಡು ಬಂದಿವೆ. ಈ ಘಟನೆಗೆ ಸಂಬಂಧಪಟ್ಟಂತೆ ಒಂದು ನಿರ್ಣಯವನ್ನು ಮಂಡಿಸಬೇಕೆಂದು ನಾನು ಯೋಚನೆ ಮಾಡಿದ್ದೇನೆ. ನಿರ್ಣಯವನ್ನು ಮಂಡನೆ ಮಾಡುವುದಕ್ಕಿಂತ ಮುಂಚೆ ಸದನದಲ್ಲಿ ಸರಿಯಾದ ವಾತಾವರಣ ಇರಬೇಕು. ಎಲ್ಲರೂ ಸಹ ಪ್ರಜಾ ಪ್ರಭುತ್ವದ ತತ್ವಗಳಿಗೆ ಅನುಗುಣವಾಗಿ ನಡೆದುಕೊಂಡು ಹೋಗಬೇಕೆನ್ನುವ ದೃಷ್ಟಿಯಿಂದ ಸಭೆಯಲ್ಲಿ ಧರಣಿ ಮಾಡುತ್ತಿರುವ ಸ್ನೇಹಿತ ಸದಸ್ಯರುಗಳು ತಮ್ಮ ತಮ್ಮ ಸ್ಥಾನಕ್ಕೆ ಬರಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ಸ್ನೇಹಿತರುಗಳು ದೊಡ್ಡ ಮನಸ್ಸು ಮಾಡಿ ತಮ್ಮ ಸ್ಥಾನಗಳಿಗೆ ಬರುತ್ತಾರೆಂದು ನಂಬಿಕೊಂಡಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕಿಯಂರೇ ದಯವಿಟ್ಟು ತಮ್ಮ ಸ್ಥಾನಕ್ಕೆ ಬನ್ನಿ. ಮಾನ್ಯ ಅಧ್ಯಕ್ಷರೇ ತಾವು ಸಹ ಮಾನ್ಯ ಸ್ನೇಹಿತರುಗಳು ವಾಪಸ್ ಬರುವಂತೆ ಕೇಳಿಕೊಂಡರೆ ಒಳ್ಳೆಯದೆಂದು ಅನಿಸುತ್ತದೆ.

ಅಧ್ಯಕ್ಷರು.—ಆಯಿತು, ದಯವಮಾಡಿಸಿ. (ವಿರೋಧ ಪಕ್ಷದವರನ್ನು ಉದ್ದೇಶಿಸಿ)

(ವಿರೋಧ ಪಕ್ಷದ ಸದಸ್ಯರುಗಳು ಸಭಾಧ್ಯಕ್ಷರ ಪೀಠದ ಮುಂದೆ ಧರಣಿ ಕುಳಿತಿದ್ದನ್ನು ವಾಪಸ್ ತೆಗೆದುಕೊಂಡು ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಂಡರು.)

ಶ್ರೀ ಎಂ. ಎಸ್. ಕೃಷ್ಣನ್.—ಸನ್ಮಾನ್ಯ ಅಧ್ಯಕ್ಷರೇ, ಈಗ ಸದನದಲ್ಲಿ ಒಳ್ಳೆಯ ವಾತಾವರಣ ಸೃಷ್ಟಿಯಾಗಿದೆ. ನಮ್ಮ ವಿರೋಧಪಕ್ಷದ ನಾಯಕಿಯರೂ ಮತ್ತು ಸ್ನೇಹಿತರು ತಮ್ಮ ತಮ್ಮ ಸ್ಥಾನಗಳಿಗೆ ಬಂದು ಕುಳಿತುಕೊಂಡಿರುವುದು ಸಂತೋಷದ ವಿಷಯ. ಈ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಲಿಕ್ಕೆ ಇಚ್ಛಿಸುತ್ತೇನೆ.

ನಿರ್ಣಯ

ದಿನಾಂಕ ೧೬ನೇ ಮಾರ್ಚ್ ೧೯೮೭ರಂದು ಈ ಸದನದ ಸದಸ್ಯರಾದ ಶ್ರೀ ಎನ್. ಎಂ. ಅಡ್ಯಂತಾಯ ಅವರನ್ನು ಅಮಾನತ್ತುಗೊಳಿಸಲಾಗಿತ್ತು. ಈ ಅಮಾನತ್‌ನ್ನು ರದ್ದುಗೊಳಿಸಿ ಮಾನ್ಯ ಸದಸ್ಯರು ಉಪವೇಶನಕ್ಕೆ ಹಾಜರಾಗುವಂತೆ ಮಾಡಬೇಕೆಂದು ಈ ನಿರ್ಣಯವನ್ನು ಮಂಡಿಸುತ್ತಿದ್ದೇನೆ.'' ಈ ನಿರ್ಣಯವನ್ನು ತಾವುಗಳೆಲ್ಲರೂ ಸಹ ಒಮ್ಮತದಿಂದ ಒಪ್ಪಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು.

ಶ್ರೀ ಎಂ. ಎಸ್. ಕೃಷ್ಣನ್.—ಕಳೆದ ಆರು ದಿನಗಳಿಂದ ತಾವುಗಳೆಲ್ಲರೂ ನೋಡಿದ ಹಾಗೆ ಅನೇಕ ಘಟನೆಗಳು ನಡೆದವು. ಅನೇಕ ಸನ್ನಿವೇಶಗಳಲ್ಲಿ ಮಾತುಕತೆಗಳು ಆದವು. ಯಾವ ಯಾವ ಕೆಲಸಗಳನ್ನು ಪ್ರಜಾಪ್ರಭುತ್ವದ ಅನುಗುಣವಾಗಿ ನಡೆಸಬೇಕಾಗಿತ್ತೋ ಅದನ್ನು ನಡೆಸಲಿಕ್ಕೆ ದುರಾದೃಷ್ಟವಶಾತ್ ಆಗಲಿಲ್ಲ. ಅನೇಕ ಕೇಳಿಕೆಗಳು ನಮ್ಮ ಮುಂದೆ ಇದ್ದವು, ಆ ಕೇಳಿಕೆಗಳು ಚರ್ಚೆ ಇಲ್ಲದಂತೆ ಪಾಸ್ ಮಾಡುವಂತಹ ಸನ್ನಿವೇಶ ಬಂದು ಹೋಯಿತು. ಸುಮಾರು ಹನ್ನೊಂದು ಸಹಸ್ರ ಕೋಟಿ ರೂಪಾಯಿಗಳ ಬೇಡಿಕೆಯು ಚರ್ಚೆ ಇಲ್ಲದೆ ಪಾಸ್ ಆಗಿರುವುದು ತಮಗೆಲ್ಲಾ ಗೊತ್ತಿದೆ. ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುವುದಕ್ಕೆ ಮತ್ತು ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ಸರ್ಕಾರದ ಎಲ್ಲಾ ಚಟುವಟಿಕೆಗಳನ್ನು ನಮ್ಮ ಮುಂದೆ ಇಡಬೇಕಾಗುತ್ತದೆ. ಸರ್ಕಾರದವರು ಕೆಲವು ಕ್ರಮಗಳನ್ನು ನಾವು ಟೀಕೆ ಮಾಡಬೇಕಾಗಿಂತ್ತದೆ, ಕೆಲವನ್ನು ಒಪ್ಪಿಕೊಳ್ಳಬೇಕಾಗುತ್ತದೆ, ಕೆಲವನ್ನು ಶ್ಲಾಘಿಸಬೇಕಾಗುತ್ತದೆ. ಈ ರೀತಿ ಎರಡೂ ರೀತಿಯ ಧೋರಣೆಗಳಿಂದ ನಡೆಯಬೇಕಾಗುತ್ತದೆ, ಇದೇ ಪ್ರಜಾಪ್ರಭುತ್ವದ ನೀತಿ. ಇದೇ ರೀತಿ ನಡೆದಿದ್ದರೆ ನಮಗೆಲ್ಲಾ ಸಂತೋಷವಾಗುತ್ತಿತ್ತು. ಆದರೆ ಅದು ನಡೆಯಲಿಲ್ಲ. ನಾನು ಕೂಡ ಸದನವನ್ನು ಮುಂದಕ್ಕೆ ಹಾಕಿ ಎಂದು ಕೇಳಿಕೊಂಡಿದ್ದೆ, ಆದರೆ ಸದನವನ್ನು ಮುಂದಕ್ಕೆ ಹಾಕಿರುವುದಕ್ಕೆ ಆಗಲಿಲ್ಲ.

ನಾವು ಎಷ್ಟು ಪ್ರಯತ್ನಪಟ್ಟರೂ ಕೂಡ ಆಗಲಿಲ್ಲ. ಆ ಬಗ್ಗೆ ನಡೆದ ಪ್ರಯತ್ನಗಳನ್ನು ನಾನು ಈಗ ಪುನಃ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಈಗ ೨–೩ ಸಂದರ್ಭಗಳಲ್ಲಿ ನಡೆದಿರುವ ಘಟನೆಗಳಿಂದ ನಾವು ಒಂದು ಅಂಶವನ್ನು ತಿಳಿದುಕೊಳ್ಳಬೇಕು. ಅದೇನೆಂದರೆ, ಇದಕ್ಕೆ ಕಾರಣರು ಯಾರು ಎನ್ನುವುದು ಈ ಎರಡು ಪಕ್ಷಗಳಲ್ಲಿ ಯಾರು ಕಾರಣರು ಎಂದು ಕೂಡ ನಾನು ಹೇಳುವುದಿಲ್ಲ ಇದಕ್ಕೆ ಇಬ್ಬರೂ ಕೂಡ ಕಾರಣರಾಗಿದ್ದಾರೆ. ಇಬ್ಬರೂ ಕೂಡ ಪಟ್ಟು ಹಿಡಿದು ಕುಳಿತುಕೊಂಡರೆ, ಹಾಗೆ ಪಟ್ಟು ಹಿಡಿದವರನ್ನು ನಮ್ಮಂತಹವರು ಹೇಗೆ ಬಿಡಿಸುವುದು ? ಅದು ತುಂಬಾ ಕಷ್ಟದ ಕೆಲಸ. ಎರಡು ಬಲವಾದಂತಹ ರಾಜಕೀಯ ಪಕ್ಷಗಳು ಪಟ್ಟು ಹಿಡಿದುದನ್ನು ಬಿಡಿಸುವುದು ಅಷ್ಟು ಸುಲಭವಲ್ಲ. ಅದನ್ನು ಬಗೆಹರಿಸುವುದು ಕೂಡ ಅಷ್ಟು ಸುಲಭವಲ್ಲ ಎಂಬ ವಿಚಾರ ನನಗೆ ಗೊತ್ತು, ನಾನು, ಮಾನ್ಯ ವೆಂಕಟರಾಮಯ್ಯನವರು ಮತ್ತು ಮಾನ್ಯ ಯಡಿಯೂರಪ್ಪನವರು ಅಂದಿನಿಂದಲೂ ಪ್ರಯತ್ನ ಪಡುತ್ತಿದ್ದರೂ ಒಂದು ಹಂತಕ್ಕೆ ಬಂದು ಪುನಃ ಸಮಸ್ಯೆಗಳು ಬರುತ್ತಿದ್ದವು. ನಿನ್ನೆ ಹಾಗೆಯೇ ಆಯಿತು. ಏನೇ ಇರಲಿ, ಇವೊತ್ತು ಒಂದು ಸಮಸ್ಯೆಗೆ ಇತ್ಯರ್ಥವನ್ನು ಕಂಡಂತಾಗಿದೆ. ಅದಕ್ಕಾಗಿ ಸಂತೋಷ ಪಡಬೇಕಾಗಿದೆ. ಇಂತಹ ಸಂದರ್ಭಗಳಲ್ಲಿ ಎರಡು ಕಡೆಯವರು ಪಟ್ಟು ಹಿಡಿಯದಿದ್ದರೆ ಸಮಸ್ಯೆ ಬಗೆಹರಿಯಲು ಸಾಧ್ಯವಾಗುತ್ತದೆ ಕೆಲವು ಸೂಚನೆಗಳನ್ನು ನಾವು ಕೊಟ್ಟಿದ್ದೆವು. ಅವರೂ, ಇವರೂ, ಒಪ್ಪಿಕೊಳ್ಳಲ್ಲಿಲ್ಲವಾದ ಕಾರಣದಿಂದಾಗಿ ಮಾತ್ರ, ಈ ಒಂದು ಸಮಸ್ಯೆ ಇತ್ಯರ್ಥವಾಗಲು ಇಷ್ಟು ದೀರ್ಘವಾಯಿತು. ಈ ತರಹದ ಸನ್ನಿವೇಶಗಳು ಬರಕೂಡದು ಎಂದು ನಾನು ಹೇಳಬಯಸುತ್ತೇನೆ. ಇಂತಹ ಸನ್ನಿವೇಶಗಳು ಹಿಂದೆ ಕೂಡ ಆಗಿರಲಿಲ್ಲ, ಮುಂದೆಯೂ ಕೂಡ ಆಗಬಾರದು ಎಂದು ನಾವು ಆಶಿಸುತ್ತೇವೆ. All is well that ends well particularly to those who were in the well. ಇಷ್ಟೆಲ್ಲಾ ಚರ್ಚೆ ಮಾಡಬೇಕಾದರೆ, ಮಾನ್ಯ ಅಡ್ವಂತಾಯ ಮತ್ತು ಮಾನ್ಯ ಉಮರಬ್ಬರವರು ಪ್ರಸ್‌ನಲ್ಲಿ ಹೋಗಿ ಒಂದು ಹೇಳಿಕೆ ಕೊಟ್ಟು ಮತ್ತೊಂದು ಸಮಸ್ಯೆಯನ್ನು ಹುಟ್ಟುಹಾಕಿದರು. ನನ್ನ ಅಭಿಪ್ರಾಯದಲ್ಲಿ, ಅವರುಗಳು ಅವರ ಇಚ್ಛೆಯ ರೀತಿಯಲ್ಲಿ ಮಾಡಿದ್ದಾರೆ. ಆದರೆ ಈ ತರಹದ ಸನ್ನಿವೇಶಗಳು ಬಂದಾಗ ಈ ರೀತಿಯಾಗಿ ಮಾಡುವುದು ತಪ್ಪು ಎಂದು ಕಾಣುತ್ತದೆ. ಹಾಗೆ ಮಾಡಿದರೆ ಅದು ಸರಿಯಾಗಿರುವುದಿಲ್ಲ. ಆ ಕಾರಣದಿಂದಾಗಿಯೂ ಈ ಪರಿಸ್ಥಿತಿಯು ಮುಂದುವರಿಯಿತು ಎಂದು ಕಾಣುತ್ತದೆ. ಅಂತೆಯೇ ಮಾನ್ಯ ಸದಸ್ಯರುಗಳು ಪ್ರಿವಿಲೇಜ್ ಮೋಷನ್‌ನ್ನು ಕೂಡ ಮೂವ್ ಮಾಡಲಿದ್ದಾರೆ ಎಂದು ನನಗೆ ತಿಳಿದು ಬಂದಿದೆ ನಾನು ಮೊದಲು ಅವರಲ್ಲಿ ಕೇಳಿಕೊಳ್ಳುವುದೇನೆಂದರೆ ನಾವುಗಳು ನಮ್ಮ ಮೇಲಿರುವ ದೊಡ್ಡ ಜವಾಬ್ದಾರಿಯನ್ನು ಈ ಸದನದಲ್ಲಿ ನಿರ್ವಹಿಸಬೇಕಾಗಿದೆ. ಆದುದರಿಂದ ಅಂತಹ ಒಂದು ಕಹಿ ಭಾವನೆಯನ್ನು ನಾವುಗಳು ಯಾರೂ ಇಟ್ಟುಕೊಳ್ಳಬಾರದು. ಅಂತೆಯೇ ತಾವುಗಳು ಈಗ ತಂದಿರುವ ಪ್ರಸ್ತಾವಕ್ಕೆ ತಮ್ಮ ಒಪ್ಪಿಗೆಯನ್ನು ದಯಮಾಡಿ ಕೊಡಬೇಕು. ಮತ್ತು ಈ ಪ್ರಕರಣವನ್ನು ಇಲ್ಲಿಗೇ ಮುಗಿಸಿಬಿಡಬೇಕು. ನಮಗೆ ಮುಂದಿನ ಮಹತ್ವರವಾದ ಕಾರ್ಯಕ್ರಮಗಳು ಇವೆ, ಹಲವಾರು ಬೇಡಿಕೆಗಳ ಬಗ್ಗೆ, ಅದರಲ್ಲಿಯೂ ಮಾನ್ಯ ಮುಖ್ಯಮಂತ್ರಿಯವರ

ಇಲಾಖೆಗೆ ಸಂಬಂಧಪಟ್ಟ ಹಾಗೆ ಅನೇಕ ಬೇಡಿಕೆಗಳ ಮೇಲೆ ನಾವುಗಳು ಚರ್ಚೆ ಮಾಡಬೇಕಾಗಿದೆ, ಮತ್ತು ಅದಕ್ಕೆ ಅವಕಾಶವೂ ಇದೆ. ಮತ್ತು ಪ್ರಜಾಪ್ರಭುತ್ವಕ್ಕನುಸಾರವಾಗಿ ನಾವುಗಳು ಇಲ್ಲಿ ಕೆಲಸ ಮಾಡಬೇಕಾಗುತ್ತದೆ. ಅದರ ಆಧಾರದ ಮೇಲೆ ಕೆಲಸ ಕಾರ್ಯಗಳು ನಡೆಯಲಿಕ್ಕೆ ಬೇಕಾಗುತ್ತದೆ. ಈ ದೇಶದ ಜನರೆಲ್ಲರೂ ಕೂಡ ನಮ್ಮನ್ನು ಕೇಳುತ್ತಿರುತ್ತಾರೆ. ಅದರಲ್ಲೂ ಬೆಂಗಳೂರಿನಲ್ಲಿರುವ ನಮ್ಮ ಪಕ್ಷದವರು, ಸ್ನೇಹಿತರು, ಇತರರೆಲ್ಲರೂ ಕೇಳುತ್ತಿದ್ದಾರೆ. ಹಳ್ಳಿಗಳ ಕಡೆ ನಾನು ಹೋಗಿಲ್ಲ. ಆದರೂ ಕೂಡ ನಮ್ಮ ಪಕ್ಷದವರು ಹೋದವರು ಹೇಳುತ್ತಿದ್ದಾರೆ ಅಲ್ಲಿಯ ಜನರು ಶಾಸನಸಭೆಗಳಲ್ಲಿ ಹೀಗೆಯೇ ಮಾಡುವುದು ನಿಮ್ಮ ಪ್ರಜಾಪ್ರಭುತ್ವದ ನೀತಿಯೇ ಎಂದು ಕೇಳುತ್ತಿದ್ದಾರಂತೆ. ನಾವಿಲ್ಲಿ ಇರುವುದು ಜನತೆಯ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ ಮತ್ತು ಅವುಗಳನ್ನು ಇತ್ಯರ್ಥ ಮಾಡುವುದಕ್ಕೆ. ಸರಕಾರವೂ ಸಹ ತನ್ನ ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸಲೇ ಬೇಕಾಗುತ್ತದೆ. ಈ ಸಮಸ್ಯೆಯನ್ನು ಇತ್ಯರ್ಥ ಮಾಡುವಲ್ಲಿ, ಈ ಸಭೆಯ ಘನತೆ ಗೌರವಗಳನ್ನು ಕಾಪಾಡಿಕೊಂಡು ಬರುವಲ್ಲಿ, ಮತ್ತು ಗೌರವವನ್ನು ಎತ್ತಿಹಿಡಿಯುವುದರಲ್ಲಿ ಅನುಸರಿಸಬೇಕಾದ ಮತ್ತು ಇತರ ವಿಷಯಗಳ ಬಗ್ಗೆ ಮಾನ್ಯ ಸಭಾನಾಯಕರು ಮೊನ್ನೆ ದಿನ ಮಾತನಾಡಿದ್ದರು. ಹಾಗೆಯೇ ತಾವೂ ಕೂಡ ತಮ್ಮ ಮೇಲಿರುವಂತಹ ದೊಡ್ಡದಾದ ಜವಾಬ್ದಾರಿಯನ್ನು ನಿರ್ವಹಿಸಲಿಕ್ಕೆ ತುಂಬಾ ಪ್ರಯತ್ನಗಳನ್ನು ಪಟ್ಟಿದ್ದೀರಿ. ಬಹಳ ಜವಾಬ್ದಾರಿಯುತವಾಗಿ ಇತ್ಯರ್ಥ ಪಡಿಸುವಲ್ಲಿ ತಮ್ಮ ಜವಾಬ್ದಾರಿಯನ್ನು, ಕರ್ತವ್ಯವನ್ನು ನಿರ್ವಹಿಸಿದ್ದೀರಿ. ಒಟ್ಟಿನಲ್ಲಿ ಈಗ ಸಭೆಯಲ್ಲಿ ಮಂಡಿಸಿದ ನಿರ್ಣಯವನ್ನು ತಾವುಗಳು ಒಪ್ಪಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಅಂತೆಯೇ ಎರಡು ಪಕ್ಷದವರಿಗೂ ನನ್ನ ಒಂದು ವಿನಂತಿಯನ್ನು ಮಾಡಿಕೊಂಡು, ಇಂತಹ ತಪ್ಪುಗಳು ನಡೆದ ಬಗ್ಗೆ ತಿದ್ದಿಕೊಂಡು ಹೋಗುವ ಒಂದು ಸದ್ಭಾವನೆಗಳೊಂದಿಗೆ ಮುಂದೆ ನಡೆದುಕೊಳ್ಳೋಣ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ತಮಗೆ ಕೃತಜ್ಞತೆಗಳನ್ನು ಅರ್ಪಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ.

"ದಿನಾಂಕ 16ನೇ ಮಾರ್ಚ್ 1987 ರಂದು ಶ್ರೀ ಎನ್. ಎಂ. ಅಡ್ಯಂತಾಯ ಅವರನ್ನು ಸದನದ ಸೇವೆಯಿಂದ ಅಮಾನತ್ತು ಗೊಳಿಸಿದ್ದ ಆದೇಶವನ್ನು ರದ್ದುಗೊಳಿಸಿ ಸದಸ್ಯರು ಸದನದ ಉಪವೇಶನಗಳಿಗೆ ಹಾಜರಾಗಬೇಕೆಂದು ಈ ಸದನವು ತೀರ್ಮಾನಿಸುತ್ತದೆ".

ಪ್ರಸ್ತಾವವು ಅಂಗೀಕೃತವಾಯಿತಂ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಈ ಮನೆಯಲ್ಲಿ ಆರೇಳು ದಿವಸಗಳಿಂದ ಇದ್ದಂಥ ವಾತಾವರಣ ನಿವಾರಣೆ ಮಾಡುವುದಕ್ಕೆ ಅಣುವು ಮಾಡಿಕೊಟ್ಟ ಕೃಷ್ಣನ್‌ರವರಿಗೂ ತಮಗೂ ಮೊದಲನೆಯದಾಗಿ ನನ್ನ ಆಭಾರ ಸೂಚಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೂ ನಾವೆಲ್ಲಾ ಇಲ್ಲಿದ್ದಾಗ ನಿನ್ನೆ ಒಂದು ತಿಳಿವಳಿಕೆ ಹೇಳುವುದಕ್ಕೆ ಪ್ರಯತ್ನ ಪಟ್ಟರು. ಈ ಮನೆಯ ಗೌರವ ಅಂತಸ್ತು ಮತ್ತು ಇಲ್ಲಿ ನಡೆಯಬೇಕಾದಂಥ ನಡವಳಿಕೆಗಳ ಬಗ್ಗೆ ನಮಗೆ ಅವರು ಹೇಳಿ, ಇಷ್ಟೆಲ್ಲ ಲಕ್ಷಣಗಳಿದ್ದರೆ ಇದು ಚೆಂದ, ಇದನ್ನು ವಿೂರಿಹೋದರೆ ಈ ಮನೆಗೆ ಭೂಷಣವಲ್ಲ ಎಂದು ತಿಳಿವಳಿಕೆ ಹೇಳಲು ಪ್ರಯತ್ನ ಪಟ್ಟರು. ನಾನು ಹೇಳುವುದೂ ಅಷ್ಟೇ, ಈ ಮನೆಯ ನಡವಳಿಕೆ ಗೌರವ ಮತ್ತು ಇದರಲ್ಲಿ ನಡೆಯಬೇಕಾದ ಕರ್ತವ್ಯ ಪ್ರಜ್ಞೆಗಳನ್ನು ಕಾಪಾಡುವುದಕ್ಕೆ ಅವರಿಗಿಂತ ಹೆಚ್ಚಿನ ಕಳಕಳಿ ನಮಗೆ ಇದೆ. ಏಕೆಂದರೆ ನಾನು ಅಲ್ಲಿ ೧೦ ವರ್ಷ ಕಾಳಿತು, ಇಲ್ಲಿ ೧೦ ವರ್ಷ ಕಾಳಿತು ಕೆಲಸ ಮಾಡಿದ್ದೇನೆ. ಆದರೆ ಒಂದೊಂದು ಸಲ ಪರಿಸ್ಥಿತಿಯಿಂದಾಗಿ ಹೀಗೆಲ್ಲಾ ಆಗುತ್ತದೆ. ಕೆಲವು ಸಲ ವಿರುಪೇರಾಗುತ್ತದೆ. ಅನೇಕ ಸಲ ದೇವೇಗೌಡರು ಹೇಳುತ್ತಾರೆ, ನಡೆಯುವವನು ಎಡವುತ್ತಾನೆ ಸುಮ್ಮನೆ ಕುಳಿತಿರುವವನು ಎಡವುದಿಲ್ಲ ಎಂದು. ಹಾಗೆಯೇ, ಏನೋ ನಡೆಯುವುದಕ್ಕೆ ಹೋದಾಗ ಇನ್ನೇನೋ ನಡೆಯಬಹುದು. ಹಾಗೆ ಎಡವಿದಾಗ ಕಾಲಿಗೆ ಆದ ಗಾಯಕ್ಕೆ ಬಟ್ಟೆ ಸುತ್ತಿಕೊಂಡು ಗಾಯಂ ವಾಸಿ ಮಾಡಿಕೊಳ್ಳುವುದು ಧರ್ಮ. ಆ ರೀತಿ ಈ ಸಲವೂ ಏನೋ ವಿಷಗಳಿಗೆಯಲ್ಲಿ ಆಗಿದ್ದರೆ ವಿಷವನ್ನು ಈಗ ತೆಗೆದು ಹಾಕಿದ್ದೇವೆ. ೮ ದಿನಗಳ ಹಿಂದೆ ನಡೆದಂಥ ಕೆಟ್ಟ ವ್ಯವಹಾರಕ್ಕೆ ನಿಜವಾಗಿಯೂ I am very sorry about it. ಇನ್ನು ಮುಂದಕ್ಕೆ ತಾವು ಎಲ್ಲಾ ಕೆಲಸಕ್ಕೆ ಅನುವು ಮಾಡಿಕೊಟ್ಟಿದ್ದೀರಿ, ಅದರಲ್ಲೂ ನಮ್ಮ ಮುಖ್ಯ ಧ್ಯೇಯವಾದ ಎಲೆಕ್ಷನ್ ಬಗ್ಗೆ, ನಾಮಿನೇಷನ್ ಬಗ್ಗೆ ಚರ್ಚೆ ಮಾಡುವುದಕ್ಕೆ ಅಣುವು ಮಾಡಿ ಕೊಟ್ಟಿ

ದ್ದೀರಿ. ಹಾಗೆಯೇ ಮಾನ್ಯ ಮುಖ್ಯಮಂತ್ರಿಗಳೂ ಚರ್ಚೆಗೆ ಆಣುವು ಮಾಡಿಕೊಡುತ್ತಾರೆಂದು ನಂಬಿ ತಮಗೆ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತಾ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಈ ಒಂದು ಪ್ರಸ್ತಾಪನೆಕ್ಕೆ ಕೊನೆಯು ತೆರೆಬಿತ್ತು ಎಂದು ನಾನು ಅಂದುಕೊಂಡಿದ್ದೇನೆ. ಈ ಪ್ರಹಸನ ದುರಂತವೋ ಅಥವಾ ಸುಖಾಂತವೋ ಎಂದು ಹೇಳುವುದಕ್ಕೆ ಇನ್ನೂ ಕಾಯ್ದು ನೋಡಬೇಕಾಗಿದೆ. ಮಾನ್ಯ ಕೃಷ್ಣನ್‌ರವರು ಈ ಒಂದು ಇಕ್ಕಟ್ಟು ಪ್ರಾರಂಭವಾದ ಕ್ಷಣದಿಂದಲೂ ಯಾವುದಾದರೂ ಒಂದು ರೀತಿಯ ಪರಿಹಾರ ಒದಗಿಸಬೇಕೆಂದು ತುಂಬಾ ಪ್ರಯತ್ನ ಪಟ್ಟರು. ಅದನ್ನು ನೋಡಿ ನಾನು ಮೊದಲನೆಯ ಸಲವೇ ಹೇಳಿದೆ, ಕೃಷ್ಣಾ ಸಂಧಾನ ಪ್ರಾರಂಭವಾಯಿತು ಎಂದು. ಆದರಲ್ಲಿ ಅವರು ಯಶಸ್ವಿಯೂ ಆಗಿದ್ದಾರೆ. ಅವರ ಈ ಪ್ರಾಮಾಣಿಕ ಪ್ರಯತ್ನಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ ಮಾನ್ಯ ವಿರೋಧೀ ಪಕ್ಷದ ನಾಯಕರು ತಮ್ಮ ಅತ್ಯಂತ ಸಂಕ್ಷಿಪ್ತವಾದಂತಹ ಭಾಷಣದಲ್ಲಿ ಹೇಳಬೇಕಾದ ಎಲ್ಲಾ ಅವಶ್ಯಕ ಮಾತುಗಳನ್ನು ಹೇಳಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅವರ ಮನಸ್ಸಿಗಾದರೂ ಆದಂತಹ ಘಟನೆ ಆಗಬಾರದಂತಹ ಘಟನೆ ಎಂದು ಅನ್ನಿಸಿದೆ, ಸಂತೋಷ. ಇವರಲ್ಲಿ ಕೆಲವು ಜನ ಸದಸ್ಯರು ತಾವು ಗೆದ್ದೆವು ಎಂದು ಹೇಳತಕ್ಕಂತಹ ಭಾವನೆ ಅವರಲ್ಲಿ ಬರಬಹುದು, ಎರಡು ತರಹದ, ವರ್ಗದ ಜನರು ನಮ್ಮಲ್ಲಿ ಇರುತ್ತಾರೆ. ಕೆಲವರು ಸೋತು ಗೆಲ್ಲುತ್ತಾರೆ ಇನ್ನು ಕೆಲವರು ಗೆದ್ದು ಸೋಲುತ್ತಾರೆ, ನವ್ಯ ದೃಷ್ಟಿಯಲ್ಲಿ ಯಾರು ಸೋತು ಗೆಲ್ಲುತ್ತಾರೆಯೋ ಅವರು ಹೆಚ್ಚು ಗೌರವಕ್ಕೆ ಪಾತ್ರರಂ ಎಂದು ಅನ್ನಿಸುತ್ತದೆ. ಆದರೆ ಇದರಲ್ಲಿ ಸೋಲಂ ಅಥವಾ ಗೆಲಂನಿನ ಪ್ರಶ್ನೆಯೇ ಇಲ್ಲ, ಯಾರದಂ ಸೋಲು. ಯಾರದು ಗೆಲುವು, ನಾಲ್ಕು ದಿನಗಳಲ್ಲಿಯೂ ಪ್ರತಿಷ್ಠೆಯ ಬಂಡೆಗಳಲ್ಲಿನ ಮೇಲೆ ನಮ್ಮ ಮಾತುಕತೆಗಳೆಲ್ಲಾ ಬಿದ್ದು ಚೂರು ಚೂರಾದವು, ಪ್ರತಿಷ್ಠೆ ಅತಿ ಅಗತ್ಯವಾದಂತಹ ಒಂದು ವಿಚಾರ ಆದರೆ ಪ್ರತಿಷ್ಠೆ ಯಾರದ್ದು ನಾವು ವ್ಯಕ್ತಿಗತವಾದಂತಹ ಪ್ರತಿಷ್ಠೆಗೆ ಮಹತ್ವ ಕೊಡಬೇಕೋ ಅಥವಾ ಸದನದ ಪ್ರತಿಷ್ಠೆಗೆ ಮಹತ್ವ ಕೊಡಬೇಕೋ ಎಂದು ಇದೆ. ಇದನ್ನು ನಾವು ನಿರ್ಮಾನ ಮಾಡಬೇಕಾದಂತಹ ಒಂದು ವಿಚಾರ. ಈ ಸದನಕ್ಕೆ ತನ್ನದೇ ಆದಂತಹ ಧ್ವನಿ ಇಲ್ಲ ಈ ಸದಸ್ಯರು ಇಲ್ಲದಿದ್ದರೆ ಈ ಸದನದ ಮೂಕ, ಈ ಸದಸ್ಯರು ಇಲ್ಲದಿದ್ದರೆ ಈ ಸದನ ಮರುಭೂಮಿ ಈ ಸದನದ ಗೌರವ, ಈ ಸದನದ ಪ್ರತಿಷ್ಠೆ ಇದು ಇಲ್ಲಿ ಇರತಕ್ಕಂತಹ ಸದಸ್ಯರ ವರ್ತನೆಯ ಮೇಲೆ ಇದೆ ಎಂದು ನಾವು ಎಂದೂ ಮರೆಯತಕ್ಕದ್ದಲ್ಲವೆಂದು ನಾನಂ ಬಹಳ ವಿನಯಂ ಪೂರ್ವಕವಾಗಿ ಹೇಳುವುದಕ್ಕೆ ಬಯಸುತ್ತೇನೆ. ಒಬ್ಬ ತತ್ವ ಜ್ಞಾನಿ ಹೇಳಿದ್ದನ್ನು ಇಲ್ಲಿ ಜ್ಞಾಪಿಸಿ ಕೊಳ್ಳಬೇಕಾಗಿದೆ. 'Politics is the last resort of a scoundrel' ಎಂದು. ಆದರೆ ನಮ್ಮ ವರ್ತನೆ ಅದನ್ನು ಜಸ್ಟಿಫೈ ಮಾಡತಕ್ಕಂಥಾದ್ದು ಆಗಕೂಡದು. ರಾಜಕೀಯದಲ್ಲಿರತಕ್ಕಂತಹವರ ವರ್ತನೆ ಹೇಗೆ ಇರಬೇಕೆಂದರೆ ಈ 'ಮಾತು ಸುಳ್ಳಿ ಎಂದು ಹೇಳತಕ್ಕಂತಹ ರೀತಿಯಲ್ಲಿ ಇರಬೇಕಂ. ಆದರೆ ಅನೇಕ ಸಲ ಈ ಒಂದು ಉಲ್ಲೇಖನವನ್ನು ಸಮರ್ಥಿಸತಕ್ಕಂತಹ ರೀತಿಯಲ್ಲಿ ನಮ್ಮ ವರ್ತನೆ ಆಗುತ್ತದೆ ಅದು ದುರಾದೃಷ್ಟ ನಾವು ಈ ಸದನಕ್ಕೆ ಆರಿಸಿ ಬರುವಾಗ ಯಾರಾದರೂ ಅದಂ ತನ್ನ ಕೇವಲ ವೈಯಕ್ತಿಕವಾದಂತಹ ವರ್ತನೆಯಿಂದ, ವೈಯಕ್ತಿಕವಾದಂತಹ ಹಿನ್ನೆಲೆಯಿಂದ ಅಥವಾ ವೈಯಕ್ತಿಕವಾದಂತಹ ಪ್ರಭಾವದಿಂದ ಎಂದು ತಿಳಿದುಕೊಂಡರೆ ಅದು ತಪ್ಪು. ಈ ಸದನಕ್ಕೆ ಆರಿಸಿ ಬರುವಾಗ ಅನೇಕ ಫ್ಯಾಕ್ಟರ್ಸ್ ಇರುತ್ತವೆ, ಅದು ಪಕ್ಷ ಬಲ ಇರಬಹುದು, ಪೂರ್ವಜರ ಬಲ ಇರಬಹುದು, ಜಾತೀಯ ಬಲ ಇರಬಹುದು, ಕ್ಷೇತ್ರದ ಬಲ ಇರಬಹುದು, ಬೇರೆ ಬೇರೆ ಪಂಗಡಗಳಲ್ಲಿ ಒಟ್ಟಿಗೆ ಇದ್ದು ಮತ ಹಂಚಿ ಹೋದ ಕಾರಣದಿಂದಲೂ ಇರಬಹುದು.

ಆದುದರಿಂದ ಆರಿಸಿ ಬಂದವರೆಲ್ಲರೂ ಪ್ರಾಮಾಣಿಕರು, ಸಂಭಾವಿತರು, ಒಳ್ಳೆಯ ನಡೆತೆ ಇದ್ದಂಥವರು ಎಂದು ಯಾರೂ ತಿಳಿದುಕೊಳ್ಳಬೇಕಾಗಿಲ್ಲ ಆರಿಸಿ ಬಂದ ಮೇಲೆ ನಾವು ಈ ಸ್ಥಾನಕ್ಕೆ ಅರ್ಹತೆಯನ್ನು ಪಡೆದುಕೊಳ್ಳತಕ್ಕಂಥ ಪ್ರಯತ್ನವನ್ನು ಮಾಡಬೇಕು. ಹಿಂದೆ ಅನೇಕ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಸಿಕ್ಕಿದಂಥವರೂ ಕೂಡಾ ಆರಿಸಿ ಬಂದಿದ್ದಾರೆ, ಅದು ನನಗೆ ಗೊತ್ತಿದೆ. ಆದರೆ ನಾವು ಇಲ್ಲಿ ಬಂದ ಮೇಲೆ ಅಂಥ ಕೆಲಸವನ್ನು ಮಾಡಕೂಡದು ಎಂದು ಇಷ್ಟನ್ನು ನಾವು ತಿಳಿದುಕೊಳ್ಳಬೇಕು ಎಂದು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ, ನಾವು ಎಂದೂ ಯಾವುದೇ ರೀತಿಯ ಚರ್ಚೆಗೆ ವಿರೋಧ ಮಾಡಿಲ್ಲ, ಚರ್ಚೆಯಿಂದಲೇ ಈ ಸರ್ಕಾರ. Democracy is a Government by discussion. ಅದರಲ್ಲಿ ನಮಗೆ ನಂಬಿಕೆ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಸಾವಿರಾರು ಕೋಟಿ ರೂಪಾಯಿಗಳಷ್ಟನ್ನು ಚರ್ಚೆ ಇಲ್ಲದೇ ಪಾಸು ಮಾಡಿಕೊಂಡಿದ್ದೀರಿ,

ಶ್ರೀ ರಾಮಕೃಷ್ಣ ಹೆಗಡೆ.— ಆದಕ್ಕೆ ನಾವು ಏನು ಮಾಡೋಣ. ತಮ್ಮನ್ನು ಮೇಲೆ ಎತ್ತಬೇಕು ಎಂದು ಪ್ರಯತ್ನ ಮಾಡಿದರೂ ಅದು ಸಾಧ್ಯವಾಗಲೇ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈ ಬುದ್ಧಿ ಆಗಲೇ ಬಂದಿದ್ದರೆ ಆಗ ಚರ್ಚೆಯಾಗುತ್ತಿತ್ತು.

ಶ್ರೀ ರಾಮಕೃಷ್ಣ ಹೆಗಡೆ. — ಮಾತು ಎಷ್ಟು ತೀಕ್ಷ್ಣವಾಗಿ ಬರುತ್ತದೆಯೋ ಅಷ್ಟು ತೀಕ್ಷ್ಣವಾಗಿ ಅದು ಅವಾಚ್ಯ ಮಾತಾಗಕೂಡದು. ಅದು ಅನ್‌ಪಾರ್ಲಿಮೆಂಟರಿ ಆಗಕೂಡದು. ನಾನು ಒಂದು ಉದಾಹರಣೆಯನ್ನು ಕೊಟ್ಟರೆ ಯಾರೂ ತಪ್ಪು ತಿಳಿವಳಿಕೆ ಮಾಡತಕ್ಕಂಥ ಆಗತ್ಯ ಇಲ್ಲ. ಇಬ್ಬರು ಮನುಷ್ಯರು ಒಂದೊಮ್ಮೆ ಜಗಳ ಮಾಡಿಕೊಂಡರೆ ನಾಯಿಗಳು ಜಗಳ ಮಾಡಿದ ಹಾಗೆ ಮಾಡುತ್ತಾರೆಯೇ? ಒಂದು ನಾಯಿಯನ್ನು ನೋಡಿ ಮತ್ತೊಂದು ನಾಯಿ ಬೊಗಳುತ್ತಿರುತ್ತದೆ. ಆದರೆ ಮನುಷ್ಯರಿಗೆ ಪ್ರಾಣಿಗಳಿಗಿಂತಲೂ ಸ್ವಲ್ಪ ಹೆಚ್ಚು ಬುದ್ಧಿಯನ್ನು ದೇವರು ಕೊಟ್ಟಿದ್ದಾನೆ, ವಿವೇಕವನ್ನು ಕೊಟ್ಟಿದ್ದಾನೆ. ಪ್ರಾಣಿಗಳಿಗೆ ವಿವೇಕ ಇಲ್ಲ. ಆದುದರಿಂದ ನಮ್ಮಲ್ಲಿ ಎಷ್ಟೇ ಘರ್ಷಣೆಯಾಗಲಿ. ನಮ್ಮಲ್ಲಿ ಘರ್ಷಣೆಯಾಗುವುದಿಲ್ಲವೇ? ಆಗುತ್ತದೆ. ರಿಪಾರ್ಟೀಸ್ ಆಗುತ್ತದೆ. ವ್ಯಂಗ್ಯವಾಗುತ್ತದೆ. ಆದರೆ ಕೈ ತೋಳು ಏರಿಸುವುದು ಅಲ್ಲ. ನಾವೆಲ್ಲರೂ ಇಲ್ಲಿ ಒಂದು ನಿರ್ಧಾರವನ್ನು ಮಾಡೋಣ. ಎಂತಹದೇ ಕ್ಷೋಭೆಯ ಪ್ರಸಂಗ ಬರಲಿ, ಮಿತಿ ಮೀರಿದಂಥದ್ದು ಒಂದು ಬರಲಿ, ಈ ಬಾವಿಯಲ್ಲಿ ಯಾರು ಬೀಳಲಿಕ್ಕೆ ಹೋಗಕೂಡದು ಎಂದು ಒಂದು ಪ್ರತಿಜ್ಞೆಯನ್ನು ಮಾಡೋಣ. ಇದನ್ನು ಇಲ್ಲಿಯೂ ಹೇಳುತ್ತೇನೆ. ಆಲ್ಲಿಯೂ ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಈ ಪ್ರಸಂಗದಲ್ಲಿ ಸಿಂಧ್ಯಾರವರು ಬಾವಿಗೆ ಬೀಳಲಿಕ್ಕೆ ಹೋದಾಗ ಅವರನ್ನು ಎತ್ತಲಿಕ್ಕೆ ಹೋದರೆ ನಮ್ಮನ್ನೇ ಅವರು ದೂಡಿಬಿಟ್ಟರು.

ಶ್ರೀ ರಾಮಕೃಷ್ಣ ಹೆಗಡೆ.—ಈ ಕಡೆಯವರು ಯಾರೂ ಬಾವಿಯಲ್ಲಿ ಬೀಳುವುದಿಲ್ಲ. ಸಿಟ್ಟು ಬಂದರೆ ಇನ್ನು ಕೂದಲನ್ನು ಪರೆಚಿಕೊಳ್ಳುತ್ತಾರೆ. ಈ ಮೈಕನ್ನು ಮುರಿದಂಹಾಕುವುದು ಏತಕ್ಕೇ? ಇದರ ಮೇಲೆ ಏತಕ್ಕೆ ಸಿಟ್ಟು? ಇದು ಸುಂದರವಾದಂಥದ್ದು. ನಮ್ಮ ದೇಶದಲ್ಲಿ ಇದನ್ನು ತಯಾರು ಮಾಡುವುದಿಲ್ಲ. ಕೇಂದ್ರ ಸರ್ಕಾರದವರು ಇಂಪೋರ್ಟ್ ಮಾಡುವುದಕ್ಕೆ ಅನುಮತಿ ಕೊಡುವುದಿಲ್ಲ. ಈ ನಮ್ಮ ಅರೇಂಜ್‌ಮೆಂಟ್ಸ್‌ನ್ನು ನೋಡಿ ಎಷ್ಟು ಸುಂದರವಾಗಿದೆ ಎಂದು ಹೊಗಳಿದ್ದಾರೆ. ಇದನ್ನು ಮುರಿದು ಹಾಕಲು ವುದು ಏತಕ್ಕೆ? ನನಗಂತೂ ಇದು ಅರ್ಥವಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಬೊಮ್ಮಾಯಿಯವರು, ದೇವೇಗೌಡರು ಮಾಡಿದರು ಎಂದು.....

ಶ್ರೀ ಹೆಚ್. ಡಿ. ದೇವೇಗೌಡ.— ನನ್ನ ಲೈಫ್‌ನಲ್ಲಿ ಆ ರೀತಿ ಮಾಡಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ. — ಆ ರೀತಿ ನಮ್ಮಲ್ಲಿ ಯಾರೂ ಮಾಡಿಲ್ಲ. ಹಿಂದೆ ಗೋಪಾಲಗೌಡರು ಒಂದು ಮೈಕನ್ನು ಸಿಟ್ಟಿನ ಭರದಲ್ಲಿ ಮುರಿದರು. ಎಷ್ಟರ ಮಟ್ಟಿಗೆ ಶ್ರೀ ಗೋಪಾಲಗೌಡರು ತಮ್ಮ ದುಃಖವನ್ನು ತೋಡಿಕೊಂಡರು ಎಂಬ ಬಗ್ಗೆ ನೀವು ರೆಕಾರ್ಡ್‌ನಲ್ಲಿ ನೋಡಿ. ಕೊನೆಯದಾಗಿ ನಾನು ಹೇಳುವುದೇನೆಂದರೆ ಯಾರೂ ಈ ಬಾವಿಯಲ್ಲಿ ಬೀಳಬಾರದು, ನಾವು ಯಾರೂ ಪರಸ್ಪರ ವೈರಿಗಳಲ್ಲ. ಇವೊತ್ತು ಒಂದೊಂದು ಕ್ಷೇತ್ರದಲ್ಲಿ ಸಹಕಾರದಿಂದ ಕೆಲಸಗಳನ್ನು ನಾವುಗಳು ಮಾಡಬೇಕಾಗುತ್ತದೆ. ಜನರು ನಮ್ಮನ್ನು ಆರಿಸಿ ಕೆಲಸ ಮಾಡುವುದಕ್ಕಾಗಿ ಕಳುಹಿಸಿದ್ದಾರೆ. ಯಾವ ಅರ್ಥದಲ್ಲಿ ಅಂದರೆ ನಮ್ಮನ್ನು ಯಾವ ರೀತಿ ಆರಿಸಿ ಕಳುಹಿಸಿದ್ದಾರೋ ಅದೇ ರೀತಿ ನಿಮ್ಮನ್ನೂ ಆರಿಸಿ ಕಳಿಸಿದ್ದಾರೆಂದು ನನ್ನ ಭಾವನೆ. ಜನತೆ ಒಂದು ಪಾತ್ರವನ್ನು ನಮಗೆ ವಹಿಸಿದ್ದಾರೆ, ಹಾಗೆಯೇ ನಿಮಗೂ ಒಂದು ಪಾತ್ರವನ್ನು ವಹಿಸಿದ್ದಾರೆ. ನಮ್ಮ ನಮ್ಮ ಪಾತ್ರವನ್ನು ಪ್ರಾಮಾಣಿಕವಾದ ರೀತಿಯಲ್ಲಿ ಮತ್ತು ಪರಿಣಾಮಕಾರಿಯಾದ ರೀತಿಯಲ್ಲಿ ಮಾಡಿಕೊಂಡು ಹೋಗೋಣ. ಅದಕ್ಕೆ ನಮ್ಮ ಸಂಪೂರ್ಣ ಸಹಕಾರ ಇದೆ. ಈ ದುರ್ಘಟನೆಯಿಂದ ಯಾರ ಕಣ್ಣು ಮೇಲೆ ಒಂದು ಪರದೆ ಇದೆ, ಆ ಪರದೆ ಹರಿದು ಹೋಗಲಿ ಎಂದು ನಾನು ಆಶಯವನ್ನು ವ್ಯಕ್ತ ಮಾಡುತ್ತೇನೆ.

ಅಧ್ಯಕ್ಷರು.— ಈ ವಿಷಯ ಇಲ್ಲಿಗೆ ಮುಂಕ್ತಾಯವಾಯಿತು. ಚರ್ಚೆಯನ್ನು ಇವೊತ್ತು ಮಾಡೋಣವೊ ಅಥವಾ ನಾಳೆ ಮಾಡೋಣವೋ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.— ನಾಳೆ ಮಾಡೋಣ.

ನಿಯಮ ೧೯೧ರ ಮೇರೆಗೆ ಹಕ್ಕು ಚ್ಯುತಿ ನಿರ್ಣಯ

ಶ್ರೀ ಜಿ. ರವೀಂದ್ರ ಕಂಮಾರ್ (ಶ್ರೀನಿವಾಸಪುರ).— ಸನ್ಮಾನ್ಯ ಅಧ್ಯಕ್ಷರೇ, ನಿನ್ನೆಯ ದಿವಸ ಸನ್ಮಾನ್ಯ ಮಿತ್ರರಾದ ಶ್ರೀ ಎಂ.ಪಿ. ಪ್ರಕಾಶ್ ಹಾಗೂ ನಾನು ಹಕ್ಕು ಚ್ಯುತಿ ನಿರ್ಣಯ ಕಳುಹಿಸಿದ್ದೆವು. ಅದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

"We the following Members give notice of the motion for breach of privilege and contempt ofthe House under rule191 of the Rules of Procedure and Conduct of Business of the Karnataka Legislative Assembly against Sriyuths N.M. Adyanthaya. M.L.A. and B.A. Umarabba for having shown disregard to the authority of the Chair as disclosed at the Press Conference on 22-3-1987. We are also enclosing the press cuttings for your kind reference. We request that leave be granted for moving the motion to enable us to explain the need for referring this issue to the Committee on Privileges."

ಅಧ್ಯಕ್ಷರು.— ಈ ವಿಷಯವನ್ನು ಹಕ್ಕು ಚ್ಯುತಿ ಸಮಿತಿಗೆ ತನಿಖೆಗಾಗಿ ಹಾಗೂ ಪರಿಶೀಲನೆ ಮಾಡಿ, ಇದರ ಬಗ್ಗೆ ವರದಿಗಾಗಿ ಕಳುಹಿಸುತ್ತಿದ್ದೇನೆ. ಈಗ ಸಭೆಯು ಎದ್ದು ನಾಳೆ ಬೆಳಿಗ್ಗೆ ಒಂಬತ್ತು ಗಂಟೆಗೆ ಸೇರಲಿದೆ.

(ಸಭೆಯು ಸಾಯಂಕಾಲ ೪-೧೫ಕ್ಕೆ ಮುಂಕ್ತಾಯವಾಗಿ ಮರು ದಿನ ತಾ: ೨೫-೩-೧೯೮೭ ರಂದು ೯ ಗಂಟೆಗೆ ಸೇರಲು ನಿರ್ಧರಿಸಿತು)